MYSORE LEGISLATIVE ASSEMBLY.

TWENTY-SECOND DAY.

Thursday, 2nd April 1953.

The House met in the Assembly Hall, Old Public Offices, Bangalore, at Thirty Minutes past Eight of the Clock.

MR. SPEAKER (Sri H. Siddaiya, B.A., LL.B.) in the Chair.

QUESTIONS AND ANSWERS.

Collection of paddy from large surplus holders.

Q.—270. Sri S. GOPALA GOWDA (Sagar-Hosanagar).—

Will the Government be pleased to state:—

(*a*) the number of surplus holders who are required to surrender more than 100 pallas of paddy each in every district and the total quantity of paddy required to be surrendered by such holders in each district;

(*b*) the total quantity of paddy surrendered by such holders before 15th February 1953 in each district;

(*c*) the actual quantity of paddy procured before 15th February in each district;

(*d*) whether it is the policy of the Government not to enforce the surrendering of the demanded quantity of paddy after the end of March, as declared by the Chief Minister at a public meeting in Shimoga?

A.—Sri H. SIDDAVEERAPPA (Minister for Home and Industries).—

(*a*) and (*b*) Statement appended below:—

(*c*)

Bangalore	..	8,583 pallas
Kolar	..	3,103 „
Mandya	..	2,45,897 „
Mysore	..	3,28,556 „
Hassan	..	80,177 „
Chikmagalur	..	47,676 „
Shimoga	..	2,83,129 „
Chitaldrug	..	2,135 „
Tumkur	..	185 „
Total	..	9,99,441 „

(*d*) Where the levy of paddy is not realised by the end of March 1953 in full, the period of acquisition is being extended.

	District		(*a*) *Number of holders to surrender more than* 100 *pallas of paddy*	(*b*) *The total quantity to be surrendered by such holders*	*Total quantity surrendered by such holders before* 15*th February* 1953
				Pallas	*Pallas*
1	Bangalore	..	5	726	312
2	Kolar	..	Nil	..	Nil
3	Mandya	..	453	63,923	64,196
4	Mysore	..	357	68,266	65,098
5	Hassan	..	72	9,678	5,714
6	Chikmagalur	..	128	18,943	8,648
7	Shimoga	..	906	122,187	42,663
8	Ch taldrug	..	Nil	..	Nil
9	Tumkur	..	2	219	150
	Total	..	1,923	2,83,942	1,86,781

ಶ್ರೀ ಎಸ್. ಗೋಪಾಲಗೌಡ.—ಫೆಬ್ರವರಿ 15 ರಿಂದೀಚೆಗೆ ಎಷ್ಟು ವಸೂಲಾಗಿದೆಯೆಂದು ಅಂಕಿ ಅಂಶಗಳು ಬಂದಿವೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿವೆ.

ಶ್ರೀ ಎಸ್. ಗೋಪಾಲಗೌಡ.—ಎಷ್ಟು? ದಯವಿಟ್ಟು ಹೇಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ತಾ॥ 1-4-53ರವರೆಗೆ ಒಟ್ಟು 12, 27, 418 ಪಲ್ಲಗಳು ವಸೂಲಾಗಿವೆ:

ಶ್ರೀ ಎಸ್. ಗೋಪಾಲಗೌಡ.—ಈ ವರ್ಷಕ್ಕೆ ಒಟ್ಟು ಡಿಮ್ಯಾಂಡ್ ಇರುವುದೆಷ್ಟು?

ಶ್ರೀ ಎಚ್. ಸಿದ್ದವೀರಪ್ಪ.—ಈ ವರ್ಷದ ಟಾರ್ಜೆಟ್ ಸುಮಾರು 14 ಲಕ್ಷ ಎಂದು ಗೊತ್ತು ಮಾಡಿತ್ತು.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗದಲ್ಲಿ 100 ಪಲ್ಲಗಳ ಮೇಲೆ ಕೊಡತಕ್ಕವರು 906 ಜನ ಎಂದು ಹೇಳಿದ್ದೀರಿ. ಇವರುಗಳೆಲ್ಲರೂ ಸ್ವಲ್ಪ ಸ್ವಲ್ಪ ಕೊಟ್ಟಿದ್ದಾರೆ, ಕೆಲವರು ಕೊಟ್ಟೇ ಇಲ್ಲ, ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಸ್. ಗೋಪಾಲಗೌಡ.—1,22,187 ಪಲ್ಲಗಳಷ್ಟು ವಸೂಲಾಗಬೇಕಾಗಿರುವುದರ ಪೈಕಿ 42,663 ಪಲ್ಲಗಳಷ್ಟು ಮಾತ್ರ ಶಿವಮೊಗ್ಗದಲ್ಲಿ ವಸೂಲಾಗಿದೆ. ಮಿಕ್ಕಿದ್ದನ್ನೂ ವಸೂಲು ಮಾಡುವುದಕ್ಕೇನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ವಸೂಲಾಗುತ್ತಿದೆ. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಸ್ವಲ್ಪ ತಡವಾಗಿದೆ. ತಮಗೆ ಗೊತ್ತಿರುವ ಹಾಗೆ, ಅಲ್ಲಿ ಕಟಾವಾಗುವುದೇ ತಡ.

ಶ್ರೀ ಎಸ್. ಗೋಪಾಲಗೌಡ.—ಈ ಆರ್ಡರನ್ನು ಎಲ್ಲಿಯವರೆಗೆ ಮುಂದುವರಿಸುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಟಾರ್ಜೆಟ್‌ನಷ್ಟು ದವನ ಬರುವವರೆಗೂ extend ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಅನಂತರ ಪ್ರೊಕ್ಯೂರ್‌ಮೆಂಟ್ ಆರ್ಡರನ್ನು ವಜಾ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ; ವಜಾ ಮಾಡುವುದಿಲ್ಲ. Restriction on free movement of foodgrains ಹೇಳುವ ವಿಧಿಯನ್ನು suspend ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಒಟ್ಟು ಮುಂದಣ ವರ್ಷಕ್ಕೆ ಬೇಕಾದ ಬತ್ತ ಎಷ್ಟು?

ಶ್ರೀ ಎಚ್. ಸಿದ್ದವೀರಪ್ಪ.—ಒಟ್ಟು ನಮ್ಮಲ್ಲಿ procure ಆಗುವುದು 12 ಲಕ್ಷ ಪಲ್ಲ ಬತ್ತ. ಇದರ ಮೇಲೆ ಇನ್ನೂ ಎರಡು ಲಕ್ಷ ಪಲ್ಲ ಅಕ್ಕಿ ಹೆಚ್ಚಿಗೆಬೇಕೆಂದು ಅಂದಾಜು ಮಾಡಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಈಗ ಬತ್ತದ ವಸೂಲಿಯಲ್ಲಿ ಬಾಕಿನಿಂತಿರುವವರ ಮೇಲೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಹೇಳಿದ್ದೇನೆ. ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ.

Sri M. LINGANNA.—May I know the target fixed for Mysore, Mandya and Hassan Districts?

Sri H. SIDDAVEERAPPA.—The exact figure is not here. I have received in Mysore and Mandya Districts 98 per cent of the target fixed. I have transferred it to those two districts.

Sri M. LINGANNA.—May I know whether you are reprocuring paddy from these districts?

Sri H. SIDDAVEERAPPA.—I have issued orders not to do it.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ಜಿಲ್ಲೆಗೆ ಟಾರ್ಜೆಟ್ ಗೊತ್ತುಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತುಮಾಡಿದ್ದೇವು.

ಶ್ರೀ ಎ.ವಿ. ನರಸಿಂಹರೆಡ್ಡಿ.—ಎಷ್ಟು, ಹೇಳುತ್ತೀರಾ?

Sri H. SIDDAVEERAPPA.—I want notice, because I do not want to hazard an answer.

ಶ್ರೀ ಎಚ್. ಎಸ್. ರುದ್ರಪ್ಪ.—ಈ ವರ್ಷ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಮೂರು ನಾಲ್ಕು ತಾಲ್ಲೂಕುಗಳಲ್ಲಿ ಬೆಳೆ ಚೆನ್ನಾಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗಾದರೆ ಶಿವಮೊಗ್ಗ ಜಿಲ್ಲೆಗೆ ತಾವು ಗೊತ್ತುಮಾಡಿರುವ target ಬಹಳ ಜಾಸ್ತಿಯೆಂಬುದನ್ನು ಒಪ್ಪುತ್ತೀರಾ?

Sri H. SIDDAVEERAPPA.—It was provisional and I want to revise it in the light of the experience I have got in that district this year.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪ್ರೊಕ್ಯೂರ್‌ಮೆಂಟ್ ಮಾಡಿರುವುದರಲ್ಲಿ ರಾತ್ರಿ ಒಂದು ಗಂಟೆ, ರಾತ್ರಿ 12 ಗಂಟೆ ಕಾಲದಲ್ಲೂ ವಸೂಲುಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಡಿ. ಆರ್. ಕರಿಗೌಡ.—ಹಾನನ ಡಿಸ್ಟ್ರಿಕ್ಟಿನಲ್ಲಿ ಈ ವರ್ಷ 1,50,000 ಪಲ್ಲಗಳನ್ನು ಶೇಖರಿಸ ಬೇಕೆಂದು ಮಾಡಿದೆಯೆಂದು ಹೇಳಿದ್ದೀರಿ. ಹೋದ ವರ್ಷದ ಟಾರ್ಜೆಟ್ಟು ಇನ್ನೂ ಕಡಮೆಯಾಗಿರಲಿಲ್ಲವೇ, ಈ ವರ್ಷ ಹೆಚ್ಚಿಗೆ ಶೇಖರಿಸಲು ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಹೋದ ವರ್ಷ ಗೊತ್ತು ಮಾಡಿದ ಟಾರ್ಜೆಟ್ಟು 1,19,231 ಪಲ್ಲಗಳೆಂದು ಕಡಮೆ ಗೊತ್ತುಮಾಡಿದ್ದರೂ ವಾಸ್ತವವಾಗಿ ವಸೂಲಾದದ್ದು 1,35,732 ಪಲ್ಲಗಳು. ಅದರ ಮೇಲೆ ಈ ಸಾರಿಗೆ 1,50,000 ಪಲ್ಲಗಳೆಂದು ಟಾರ್ಜೆಟ್ ಗೊತ್ತುಮಾಡಿದ್ದೇವೆ. ಅದನ್ನೀಗ revise ಮಾಡಿ 1,26,131 ಪಲ್ಲಗಳೆಂದು ಗೊತ್ತುಮಾಡಿದ್ದೇವೆ. ಅದರ ಪೈಕಿ 1,04,577 ಪಲ್ಲಗಳು ವಸೂಲಾಗಿವೆ.

ಶ್ರೀ ಡಿ. ಆರ್. ಕರಿಗೌಡ.—ಈಗಲೂ ಹಿಂಸೆ ಕೊಟ್ಟು ಧಾನ್ಯವನ್ನು ವಸೂಲು ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿವೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹಿಂಸೆಯಿಂದ ವಸೂಲು ಮಾಡುತ್ತಿಲ್ಲ. ಇನ್ನೂ ವಸೂಲೇನೋ ಮಾಡುತ್ತಿದ್ದಾರೆ.

ಶ್ರೀ ಡಿ. ಆರ್. ಕರಿಗೌಡ.—ಅರಕಲಗೂಡು ಕಡೆಯಲ್ಲ ಇನ್ನೂ ಹಿಂಸೆಯಿಂದ ವಸೂಲು ಮಾಡುತ್ತಿದ್ದಾರೆಂಬುದು ತಮಗೆ ಗೊತ್ತಿದೆಯೇ?

Sri H. SIDDAVEERAPPA.—I have issued instructions to the Deputy Commissioner not to harass the people and also to see that as far as possible it is smoothly done without giving any room for any complaint.

Controlling and rearing white breed cocoons.

Q.—519. Sri G. PAPANNA (Sidlaghatta-Chikballapur). —

Will the Government be pleased to state:—

(*a*) when was the rearing of foreign white breed silkworms started in the State; what was the quality of those worms when the work was first taken up in the State and what is the quality of the worms at present;

(*b*) the steps taken to improve the stock of the white breed worms;

(*c*) what was the quality of the hybrid cocoons obtained by mixing the imported white breed worms with the local breed of worms; what is the quality of the hybrid variety at present;

(*d*) whether they intend to enact any Law for controlling the rearing of white breed cocoons and mixed breed cocoons?

A.—Sri H. SIDDAVEERAPPA (Minister for Home and Industries).—

(*a*) In the year 1915.

The quality of the worms reared then and now does not differ very much in the first few rearings.

(*b*) (1) Selective breeding, and

(2) Hill Amelioration.

(*c*) The quality of hybrid cocoons raised from the newly imported stock is superior to the stock raised from races acclimatised to the plains. Cross-breeds supplied by the Department of Sericulture have improved.

(*d*) The Silkworm Seed (Control of Distribution) Bill was passed by the Legislative Assembly in July 1952 and rules thereunder are under scrutiny.

ಶ್ರೀ ಜಿ. ಪಾಪಣ್ಣ.—(a) ಪ್ರಶ್ನೆಗೆ ಉತ್ತರವಾಗಿ "The quality of the worms reared then and now does not differ very much in the first few rearings" ಎಂದು ಹೇಳಿದೆ. ಆದರೆ ರೈತರ ಅನುಭವದಲ್ಲಿ ಹಾಗಿಲ್ಲ. ಮುಂಚೆ ಇದ್ದದ್ದಕ್ಕೂ ಈಗ್ಯೂ ಮಟ್ಟ ಬಹಳ ಕಡಮೆಯಾಗಿದೆಯೆಂದು ಹೇಳಿದ್ದಾರೆ. ಆದ್ದರಿಂದ, ಇಲಾಖೆಯವರು ಯಾವ ಆಧಾರದಮೇಲೆ ಮಟ್ಟ ನಿರ್ಧರ ಮಾಡಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಸೆಂಟ್ರಲ್ ಸಿರ್ಕ್ ಬೋರ್ಡಿನವರು ಒಂದು ಸಂಶೋಧನಾ ಶಾಖೆಯನ್ನು ಏರ್ಪಡಿಸಿದ್ದಾರೆ. ಅವರು ಜಪಾನಿ ಪದ್ಧತಿಯೇನು, ಮತ್ತು ಬಾಕಿ ಕಡೆಯಲ್ಲಿ ಎಲ್ಲೆಲ್ಲಿ ರೇಷ್ಮೆ ಬೆಳೆಯುತ್ತಾರೆಯೋ ಅಲ್ಲಿ ಯಾವರೀತಿ ಮಾಡುತ್ತಾರೆಂದು ನೋಡಿಕೊಂಡು, ಅದನ್ನು ಯಾವರೀತಿ ಉತ್ತಮ ಪಡಿಸಬೇಕೆಂಬ ವಿಧಾನದಲ್ಲಿ ಸಂಶೋಧನಾ ಕಾರ್ಯಕ್ರಮ ಕೈಕೊಂಡಿದ್ದಾರೆ. ಅದರ ಪ್ರಕಾರ ಕೆಲವು ಸ್ಕೀಮುಗಳನ್ನು ಅವರು ಹಾಕಿಕೊಂಡು ಕೆಲಸಮಾಡುತ್ತಿದ್ದಾರೆ. ಅದರ ಪ್ರಕಾರ ಸಂಶೋಧನೆ ನಡೆಸಿರುವುದರ ಮೇಲೆ ರೆಂಡಿಟಾವನ್ನು 12 ರಿಂದ 17ಕ್ಕೆ ಏರಿಸಿದ್ದರಿಂದ ಪ್ರತಿಯೊಂದು ಪೌಂಡು ರೇಷ್ಮೆಗೂ 5 ಪೌಂಡಿನಷ್ಟು ಕರ್ಕೂ ಕಡಮೆಯಾಗುತ್ತದೆಂದು ಗೊತ್ತಾಗಿವೆ. ಆಮೇಲೆ ಇತ್ತೀಚೆಗೆ ನಡೆಸಿರುವ ಸಂಶೋಧನೆಗಳಿಂದ Selective Breeding ಮಾಡುವುದು ಉತ್ತಮವಾದ ಫಲಗಳನ್ನು ಕೊಡುತ್ತದೆಂದು ತಿಳಿದು ಬಂದಿದೆ. ಅದರಂತೆ ಮಾಡುತ್ತಿದ್ದಾರೆ.

ಶ್ರೀ ಜಿ. ಪಾಪಣ್ಣ.—ಸಂಶೋಧನೆಯ ವಿಷಯ ಮಾತ್ರ ನಾನು ಹೇಳುತ್ತಿಲ್ಲ. ಮಟ್ಟ, ಮೊದಲಿದ್ದುದಕ್ಕೂ ಈಗ್ಯೂ ಅವರು ಹೇಳಿದಂತೆ ಜಾಸ್ತಿಯಾಗಿಲ್ಲ. ಮಟ್ಟ ಇಳಿದಿದೆಯೆಂದು ರೈತರು ಹೇಳುತ್ತಾರೆ. ಆದ್ದರಿಂದ ನೀವು ಮಟ್ಟವನ್ನು ನಿರ್ಧಾರ ಮಾಡುವರೀತಿ ಯಾವುದು?

ಶ್ರೀ ಎಚ್. ಸಿದ್ದವೀರಪ್ಪ.—Scientific test ನಿಂದ ನಿರ್ಧಾರ ಮಾಡುತ್ತೇವೆ.

ಶ್ರೀ ಜಿ. ಪಾಪಣ್ಣ.—Scientific test ಗೂ ರೈತರ test ಗೂ ವ್ಯತ್ಯಾಸವಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—Scientific men ಈ ವಿಚಾರದಲ್ಲಿ ಹೀಗಿದೆ, ಹೀಗಿದೆ ಎಂದು ಹೇಳಿದರೆ because it is expert knowledge, I am bound to take the exprt's opinion. I must presume at least that it is correct unless the contrary is proved.

ಶ್ರೀ ಜಿ. ಪಾಪಣ್ಣ.—ಹಾಗಾದರೆ ರೈತರ ಅನುಭವವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗಲ್ಲ; ರೈತರ ಅನುಭವವನ್ನು ತೆಗದುಕೊಳ್ಳಬೇಕು. ಇವರ ಅನುಭವವನ್ನೂ ತೆಗೆದುಕೊಳ್ಳಬೇಕು. ಅದರ ಮೇಲೆ ಅಂಕಿ ಅಂಶಗಳ ಆಧಾರದಮೇಲೆ ಹೋಲಿಕೆಮಾಡಿ ನೋಡಬೇಕು.